ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆ ಸಹ ನಿರ್ದೇಶಕರು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ, ಖಾಲಿ ಇರುವ ಎಲ್ಲಾ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳನ್ನೂ ಶೀಘ್ರ ಭರ್ತಿ ಮಾಡಲು ಮನವಿ ಮಾಡಿಕೊಂಡಿದ್ದಾರೆ.

ಶ್ರೀ ದೊಡ್ಡಮೇಟಿ.—ಸ್ವಾಮಿ ೧೧ನೇ ಪಟ್ಟಿಯಲ್ಲಿ ಇರುವಂಥ ನನ್ನ ಪ್ರಶ್ನೆಗೆ ಲಿಖಿತ ಉತ್ತರ ಬಂದಿಲ್ಲ.

ಉಪಾಧ್ಯಕ್ಷರು.—ಬರುತ್ತದೆ ತಾವು ಸ್ವಲ್ಪ ಕುಳಿತುಕೊಳ್ಳಿ. ಸಭೆಯ ಮುಂದೆ ಕಾಗದ ಪತ್ರ ಗಳನ್ನು ಮಂಡಿಸಿದ ನಂತರ ಪ್ರಸ್ತಾಪ ಮಾಡಬಹುದು. ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಕೊಡಲಾದ ಲಿಖಿತ ಉತ್ತರಗಳು ೧೨ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ:

ಬ್ಯಾಡಗಿ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ತೋಡುವ ವಿಚಾರ

೬೯ ಶ್ರೀ ಹೆಗ್ಗಪ್ಪ ಲಂಮಾಣಿ (ಬ್ಯಾಡಗಿ).— ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿಸುವರೇ ?

ಅ) ಬ್ಯಾಡಗಿ ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಇರುವ ಕೊಳವೆ ಬಾವಿಗಳಿಗೆ ಅಳವಡಿಸಿ ರುವ ಸುಮಾರು ೪೦ಕ್ಕೆ ಪಂಪುಗಳು ದುರಸ್ತಿ ಮಾಡಲಾಗದಂತಹ ಪರಿಸ್ಥಿತಿಯಲ್ಲಿ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದರೆ ಈ ಪಂಪುಗಳನ್ನು ಬದಲಾಯಿಸಲು ಸರಕಾರವು ಯಾವ ಕ್ರಮ ಕೈಗೊಂಡಿದೆ;

ಇ) ಸರಕಾರದವರು ಆದಷ್ಟು ಬೇಗನೆ ಇದನ್ನು ಸರಿಪಡಿಸಿ ಜನರಿಗೆ ಆಗುವ ತೊಂದರೆಯನ್ನು ನಿವಾರಿಸುವರೇ ?

ಶ್ರೀ ಅಬ್ದುಲ್‌ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ ಗಳು).—

(ಅ) ಹೌದು

(ಆ) ಹಾಲಿ ಬ್ಯಾಡಗಿ ತಾಲ್ಲೂಕಿಗೆ ಯುನಿಸೆಫ್‌ನವರು ಕೊಟ್ಟಿರುವ ೨೫ ಇಂಡಿಯಾ ಮಾರ್ಕ್ ಕೈ ಪಂಪುಗಳನ್ನು ಹಳೇ ಮಾದರಿಯ ಕೈ ಪಂಪುಗಳ ಬದಲಾಗಿ ಕೂಡಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಇನ್ನುಳಿದ ೧೮ಕೈ ಪಂಪುಗಳನ್ನು ಶೀಘ್ರದಲ್ಲೆ ಸರಿಪಡಿಸಲಾಗುವುದು.

(ಇ) ಹೌದು

ಇಂಡಿಯಾ ಮಾರ್ಕ್ ೧೧ ಅಲ್ಲದ ಕೈಪಂಪುಗಳು ಇರುವ ಗ್ರಾಮಗಳ ಪಟ್ಟಿ

೧)	ಕಾಗಿನೆಲ್ಲ (ಪಿಹೆಚ್‌ಸಿ)	೨೩)	ಮಾಜಿಕೊಪ್ಪ ಕೊ. ಭಾ ೧
೨)	ಅತ್ತಿಕಟ್ಟೆ ಕೊ. ಭಾ ೧	೨೪)	ಕಾಡಮನಹಳ್ಳಿ ಕೊ. ಭಾ ೧
೩)	ಬಡಳ್ಳಿ ತಾಂಡ	೨೫)	ಅರಬಗೊಂಡಿ ಕೊ. ಭಾ ೧
೪)	ದುಳಿಕೊಪ್ಪ ಕೊ. ಭಾ ೧	೨೬)	ನೆಲ್ಲಿಕೊಪ್ಪ ಕೊ. ಭಾ ೨
೫)	ಗುಂಗರಕೊಪ್ಪ ತಾಂಡ	೨೭)	ಚಿಕ್ಕ ಭಾಸಂರ (ಪಿಹೆಚ್‌ಸಿ)
೬)	ಚಿಕ್ಕನಜಿ ತಾಂಡ	೨೮)	ಕಲಗೊಂಡ ಕೊ. ಭಾ ೧
೭)	ತಿಮ್ಮಿಯರಕೊಪ್ಪ ಕೊ. ಭಾ ೧	೨೯)	ಕೆ. ವೀರಾಪುರ ಕೊ. ಭಾ ೧
೮)	ಹಿರೆಆಣಜಿ ಕೊ. ಭಾ ೧	೩೦)	ಗುಂಡೇನಹಳ್ಳಿ (ಜೆಹೆಚ್‌ಸಿ)
೯)	ಗಂಡ್ಡದ ಮಲ್ಲಾಪುರ	೩೧)	ಕಾಟೇನಹಳ್ಳಿ ಕೊ. ಭಾ ೧
೧೦)	ಸೂಡಂಬಿ ಕೊ. ಭಾ ೧	೩೨)	ತಿಪ್ಪಲಾಪುರ ಕೊ. ಭಾ ೧

* ಸದಸ್ಯರು ಹಾಜರಿರಲಿಲ್ಲ

೧೧) ಸಿದ್ದಾಪುರ ಕೊ. ಭಾ ೧
೧೨) ಗುಮ್ಮನಹಳ್ಳಿ ಕೊ. ಭಾ ೧
೧೩) ಕಲ್ಲಾಪುರ ಕೊ. ಭಾ ೧
೧೪) ತದನ್ ಕೊ. ಭಾ ೧
೧೫) ಚಿಕ್ಕ ಬಸೂರು ಕೊ. ಭಾ ೧
೧೬) ಚತ್ರ ಕೊ. ಭಾ ೧
೧೭) ಅಲಗೇರಿ ಕೊ. ಭಾ. ೧
೧೮) ಅಂಗರಗಟ್ಟಿ ಕೊ. ಭಾ ೧
೧೯) ನಾಗಲಾಪುರ ಕೊ. ಭಾ ೧
೨೦) ಜಿ. ಚಿಲ್ಲೂರು ಕೊ. ಭಾ. ೧
೨೧) ಚಿನ್ನಿಕಟ್ಟೆ ಕೊ. ಭಾ ೧
೨೨) ಬೀರನಕೊಪ್ಪ ಕೊ. ಭಾ ೧
೨೩) ತಿಮ್ಮೇನಹಳ್ಳಿ ಕೊ. ಭಾ ೧
೨೪) ಬುಡಪನಹಳ್ಳಿ ಜೆ. ಸಿ.
೨೫) ಅರಬಗೊಂಡ ಕೊ. ಭಾ ೨
೨೬) ,, ಕೊ. ಭಾ ೩
೨೭) ,, ಕೊ. ಭಾ ೪
೨೮) ಕೆಂಗೊಂಡ ಕೊ. ಭಾ ೨
೨೯) ಕೆಂಗೊಂಡ ಕೊ. ಭಾ ೩
೩೦) ,, ಕೊ. ಭಾ ೪
೪೧) ಕಾಡಮನಹಳ್ಳಿ (ಜೆ. ಸಿ.)
೪೨) ಕದರಮಂಡಲಗಿ ಪ್ಲಾಟ್
೪೩) ತದಸ ಕೊ. ಭಾ. ೨

ಬಳ್ಳಾರಿ ಜಿಲ್ಲೆಯಲ್ಲಿ ನೀರು ಬೀಳದ ಬಾವಿಗಳಿಗೆ ಬಾವಿ ತೋಡಲು ಸಾಲ ಒದಗಿಸುವ ಬಗ್ಗೆ

೭೦ ಶ್ರೀ ಚನ್ನಬಸವನಗೌಡ (ಕೂಡ್ಲಗಿ).—ಗ್ರಾಮೀಣ ಹಾಗೂ ಪಂಚಾಯಂತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;

ಅ) ಬಳ್ಳಾರಿ ಜಿಲ್ಲೆಯಲ್ಲಿ ಸಾವಿರಾರು ನೀರು ಬೀಳದ ಬಾವಿಗಳ ವಿಷಯದಲ್ಲಿ ಬಾವಿ ತೋಡಲು ಸೌಲಭ್ಯ ಒದಗಿಸದೆ ಇರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬಾವಿ ತೋಡಿಸಲು ಎನ್.ಇ.ಎಸ್. ಮತ್ತು ಪಿ.ಎಲ್.ಡಿ. ಬ್ಯಾಂಕಿನಿಂದ ರೈತರು ಪಡೆದು ಕೊಂಡ ೭-೮ ಸಾವಿರಕ್ಕೆ ಮೀರಿ ಸಾಲದ ಮೊತ್ತ ಸುಸ್ತಿ ಬಡ್ಡಿಯಿಂದ ೨೦-೩೦ ಸಾವಿರಕ್ಕೆ ಮೀರಿ ರೈತರು ಅದನ್ನು ತೀರಿಸಲಾರದ ಸ್ಥಿತಿಯಲ್ಲಿರುವುದು ಸರ್ಕಾರದವರಿಗೆ ಗೊತ್ತಿದೆಯೇ ;

ಇ) ರೈತರು ತಮ್ಮ ಆಸ್ತಿಯನ್ನೆಲ್ಲ ಮಾರಿದರು ಸಹ ಸಾಲ ತೀರಿಸಲಾಗದೆ ದುಸ್ಥಿತಿ ಬಂದಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ ;

ಈ) ರೈತರು ಕಷ್ಟದಲ್ಲಿ ಸಹ ನೀರು ಬೀಳದ ಎಲ್ಲಾ ಬಾವಿಗಳ ಸಾಲವನ್ನು ಮಾಫಿ ಮಾಡುವ ಸಲಹೆ ಸರ್ಕಾರದಲ್ಲಿಯೇ ?

ಶ್ರೀ ಅಬ್ದುಲ್‌ನಜೀರ್‌ಸಾಬ್ (ಗ್ರಾಮೀಣ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—(ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಸೀಮಿತವಾಗಿರುತ್ತದೆ.)

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) ಇಲ್ಲ. ಸಂಬಂಧ ಪಟ್ಟ ಸರ್ಕಾರಿ ಆದೇಶಗಳನ್ನು ಮಾಹಿತಿಗಾಗಿ ಲಗತ್ತಿಸಲಾಗಿದೆ.

RURAL DEVELOPMENT AND CO-OPERATION DEPARTMENT

Extension of concession to failed dug wells/open wells financed by the L D. Banks/Nationalised/Commercial/Regional Rural Banks/PACs/FSCs/SCFSCs–issue of revised procedure.